987(1554) ಶ್ರೀ ಎನ್.ಎಲ್.ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿ ಕೆಲಸಗಳಿಗೆ ಇನ್ನೂ ಯಾವರೆಗೆ ಬಿಡುಗಡೆಯಾಗಿರುವ ಮೊತ್ತ ವೆಷ್ಟು ಮತ್ತು ಆಗಿರುವ ಕೆಲಸ ಎಷ್ಟು;

ಆ) ಕಾಮಗಾರಿ ಕೆಲಸ ವಿಳಂಬವಾಗುತ್ತಿರುವುದರಿಂದ ಜನಗಳಿಗೆ ಸಂಚಾರ ವ್ಯತ್ಯಯ ಉಂಟಾಗಿ ಅಪಘಾತಗಳು ಸಂಭವಿಸಿ ಸಾವು ನೋವುಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸತ್ತವರಿಗೆ ಮತ್ತು ಗಾಯ ಗೊಂಡವರಿಗೆ ಏನಾದರೂ ಪರಿಹಾರ ನೀಡಲಾಗಿದೆಯೇ;

ಇ) ಪರಿಹಾರ ನೀಡಲಾದ ಮೊತ್ತವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿ ಕೆಲಸಗಳಿಗೆ ದಿನಾಂಕ 15.1.2005 ರವರೆಗೆ ಬಿಡುಗಡೆಯಾಗಿರುವ ಮೊತ್ತ ರೂ.4.60 ಕೋಟಿಗಳು ಮತ್ತು ಶೇ.35 ರಷ್ಟು ಕೆಲಸ ಆಗಿರುತ್ತದೆ.

ಆ) ಕಾಮಗಾರಿಯು ನಿಗದಿಪಡಿಸಿರುವ ಪ್ರಕಾರ ನಡೆಯುತ್ತಿದೆ ಹಾಗೂ ಬದಲಿ ಸಂಚಾರ ವ್ಯವಸ್ಥೆ ಮಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

990(836) ಶ್ರೀ ನಿರ್ಮಲ್ ಸುರಾನ. (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್–86, ಬಾಣಸವಾಡಿ ಮುಖ್ಯರಸ್ತೆಯಲ್ಲಿ ನಿರ್ಮಾಣ ಹಂತದಲ್ಲಿರುವ ಫ್ಲೈಓವರ್ ಕಾಮಗಾರಿಯ ಒಟ್ಟು ಅಂದಾಜು ಮೊತ್ತವೆಷ್ಟು;

ಆ) ಇದುವರೆವಿಗೂ ಗುತ್ತಿಗೆದಾರರಿಗೆ ಪಾವತಿಸಿರುವ ಹಣ ಎಷ್ಟು :

ಇ) ಸದರಿ ಕಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ್ದ (As per Tender conditions) ಕಾಲಮಿತಿ ಏನು;

ಈ) ಗುರತ್ತಿಗೆದಾರರು ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ದಂಡನಾ ಕ್ರಮಗಳೇನು;

ಉ) ಕಾಮಗಾರಿ ವಿಳಂಬಕ್ಕೆ ಕಾರಣಗಳೇನು;

ಊ) ಸದರಿ ಕಾಮಗಾರಿಯು ಸಾರ್ವಜನಿಕ ಉಪಯೋಗಕ್ಕೆ ಯಾವ ದಿನಾಂಕದಿಂದ ಸಿದ್ಧಗೊಳ್ಳುತ್ತದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ರೂ.800 ಲಕ್ಷಗಳು

ಆ) ರೂ.335 ಲಕ್ಷಗಳು

ಇ) ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿ ಪಡಿಸಿದ್ದ ಕಾಲಮಿತಿ ದಿನಾಂಕ. 27.10.2004.

ಈ) ರೈಲ್ವೆ ಇಲಾಖೆಯು ಕೆಲಸ ನಿರ್ವಹಿಸುತ್ತಿರುವುದರಿಂದ ನೈರುತ್ಯ ರೈಲ್ವೆ ಇಲಾಖೆ ಟೆಂಡರ್ ನಿಯಮಾನುಸಾರ ಕ್ರಮ ಕೈಗೊಳ್ಳುತ್ತದೆ.

ಉ) ಕಾಮಗಾರಿ ನಡೆಯುವ ಸ್ಥಳದಲ್ಲಿ ಇರುವ ನೀರಿನ ಕೊಳವೆ, ಒಳಚರಂಡಿ ವ್ಯವಸ್ಥೆ, ಓ.ಎಫ್.ಸಿ. ಕೇಬಲ್, ಬೆಸ್ಕಾಂನ ಕೇಬಲ್, ಪಿ ಅಂಡ್ ಟಿ ಕೇಬಲ್‌ಗಳನ್ನು ಸ್ಥಳಾಂತರಿಸಬೇಕಾದ್ದರಿಂದ ಹಾಗೂ ವಾಹನಗಳಿಗೆ ಬದಲಿ ಸಂಚಾರ ವ್ಯವಸ್ಥೆ ಮಾಡಿರುವುದರಿಂದ ವಿಳಂಬವಾಗಿರುತ್ತದೆ.

ಊ) ದಿನಾಂಕ 10.2.2005ರಂದು ಆರ್.ಓ.ಬಿ ಯನ್ನು ಸಾರ್ವಜನಿಕ ವಾಹನ ಸಂಚಾರಕ್ಕೆ ಪ್ರಾಯೋಗಿಕವಾಗಿ ಬಿಟ್ಟು ಕೊಡಲು ಯೋಜಿಸಲಾಗಿದೆ.

992(838) ಶ್ರೀ ನಿರ್ಮಲ್ ಸುರಾನ (ಭಾರತೀನಗರ) : ಮಾನ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಿರ್ಮಲ ಶೌಚಾಲಯಗಳಲ್ಲಿ ಫಲಾನುಭವಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಮೂಹ ಸೌಲಭ್ಯದ ದೃಷ್ಟಿಯಿಂದ ಶೌಚಾಲಯಗಳ ನಿರ್ವಹಣಾ ವೆಚ್ಚವನ್ನು ಮಹನಗರ ಪಾಲಿಕೆಯೇ ಭರಿಸಬಹುದೆ;

ಆ) ಮಹಾನಗರ ಪಾಲಿಕೆ ನಿರ್ವಹಣಾ ವೆಚ್ಚವನ್ನು ಭರಿಸುವಲ್ಲಿ ಇರುವ ಅಡಚಣೆಗಳೇನು :

ಇ) ನಿರ್ವಹಣಾ ವೆಚ್ಚ ಭರಿಸುವಲ್ಲಿ ಉದ್ಭವಿಸುವ ಅಡಚಣೆಗಳ ನಿವಾರಣೆಗೆ ಪಾಲಿಕೆ ನಿರ್ದಿಷ್ಟ ಕ್ರಮಗೆಳನ್ನು ರೂಪಿಸಿದೆಯೇ:

ಈ) ರೂಪಿಸಿದ್ದರೆ ಅಂತಹ ಕ್ರಮಗಳ ಸಂಕ್ಷಿಪ್ತ ವಿವರಗಳೇನು:

ಉ) ಅದಕ್ಕೆ ಸಕಾರಣಗಳೇನು:

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ' ನಿರ್ಮಲ ಬೆಂಗಳೂರು' ಯೋಜನೆಯಡಿ ನಿರ್ಮಿಸಿರುವ ಶೌಚಾಲಯಗಳನ್ನು ಬಿಎಟಿಎಫ್ ಸಹಯೋಗದೊಂದಿಗೆ ರೂಪು ರೇಷೆಗೊಂಡಿದ್ದು, ಇನ್‌ಫೋಸಿಸ್ ಫೌಂಡೇಷನ್ ವತಿಯಿಂದ 'ಪಾವತಿಸಿ–ಉಪಯೋಗಿಸಿ' ಆಧಾರದ ಮೇಲೆ ಬಹುಕಾಲ ನಿರಂತರವಾಗಿ ನಿರ್ವಹಿಸಲು ನಿರ್ಮಿಸಲ್ಪಟ್ಟಿರುತ್ತವೆ. ಪ್ರಸ್ತುತ ಅಂತಹ 108 ಶೌಚಾಲಯಗಳು ಯೋಜನೆಯ ಹಂತದಲ್ಲಿರುತ್ತವೆ. ಸದರಿ ಶೌಚಾಲಯಗಳನ್ನು ಖಾಸಗಿ ಸಂಸ್ಥೆಯು ನಿರ್ವಹಿಸುತ್ತಿದ್ದು, ಪಾಲಿಕೆಯಿಂದ ನಿರ್ವಹಣಾ ವೆಚ್ಚವನ್ನು ಭರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

993(839) ಶ್ರೀ ನಿರ್ಮಲ್ ಸುರಾನ, (ಭಾರತೀನಗರ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಿವಿಧ ಸಂಘ ಸಂಸ್ಥೆಗಳಿಗೆ ವಿಶೇಷ ಆರ್ಥಿಕ ಅನುದಾನ ನೀಡಲು ಅಳವಡಿಸಿಕೊಂಡಿರುವ ಮಾನದಂಡ ಮತ್ತು ಮಾರ್ಗಸೂಚಿಗಳೇನು: